# ಕನ್ನಡ ಸಾಹಿತ್ಯ ಪರಿಷತ್ತು ನಡೆಸುವ ಸಾಹಿತ್ಯ ಪರೀಕ್ಷೆಗಳು, ಶಾಸನಶಾಸ್ತ್ರ ಡಿಪ್ಲೊಮಾ ತರಗತಿಗಳು ಮತ್ತು ಪಿಎಚ್.ಡಿ. ಸಂಶೋಧನಾ ಪ್ರಗತಿ

ಜನಸಾಮಾನ್ಯರಲ್ಲಿ, ವಿಶೇಷವಾಗಿ ಕನ್ನಡ ಯುವ ಜನತೆಯಲ್ಲಿ, ಕನ್ನಡ ಭಾಷಾ ಸಾಹಿತ್ಯಾಧ್ಯಯನದ ಬಗೆಗೆ ಆಸಕ್ತಿಯನ್ನು ಮೂಡಿಸಲು ಹಾಗೂ ಅಂದಿನ ಕನ್ನಡ ವಿದ್ಯಾಭ್ಯಾಸದಲ್ಲಿಯ ಕೊರತೆಯನ್ನು ನೀಗಲು ಬಿ.ಎಂ.ಶ್ರೀ. ಅವರು ರೂಪಿಸಿ ಪ್ರಾರಂಭಿಸಿದ ಮತ್ತೊಂದು ಮುಖ್ಯ ಯೋಜನೆ ಕನ್ನಡ ಸಾಹಿತ್ಯ ಪರೀಕ್ಷೆಗಳು. ೧೯೪೦ನೇ ಇಸವಿ ಜೂನ್ ತಿಂಗಳಿನಿಂದ 'ಕನ್ನಡ ಅಣುಗ', 'ಕನ್ನಡ ಕಾವ', 'ಕನ್ನಡ ಜಾಣ' ಪರೀಕ್ಷೆಗಳು ಪ್ರಾರಂಭವಾದವು. ಅತ್ಯಂತ ಪ್ರಾಥಮಿಕ ಹಂತದ ಪರೀಕ್ಷೆಯಾದ 'ಅಣುಗ'ಕ್ಕೆ ಹೆಚ್ಚಿನ ಉತ್ತೇಜನ ಸಿಗದ ಕಾರಣ ೧೯೪೮ರ ಸುಮಾರಿಗೆ ಅದನ್ನು ಕೈಬಿಡಲಾಯಿತು. ೧೯೬೬ರಲ್ಲಿ 'ಕನ್ನಡ ರತ್ನ' ಪರೀಕ್ಷೆ ಪ್ರಾರಂಭವಾಯಿತು. ಕನ್ನಡ ಕಾವ, ಜಾಣ ರತ್ನ ಪರೀಕ್ಷೆಗಳು ಸ್ವರೂಪದಲ್ಲಿ ಸ್ವಲ್ಪ ಬದಲಾವಣೆಯೊಂದಿಗೆ ಇಂದಿಗೂ ನಡೆದುಕೊಂಡು ಬರುತ್ತಿವೆ. ೧೯೮೨ರಿಂದ 'ಕನ್ನಡ ಪ್ರವೇಶ' ಎಂಬ ಪ್ರಾಥಮಿಕ ಹಂತದ ಪರೀಕ್ಷೆ ಪ್ರಾರಂಭವಾಗಿದೆ.

ಸಾಹಿತ್ಯ ಪರಿಷತ್ತು ಒಂದು ಸ್ವಾಯತ್ತ ಸಂಸ್ಥೆಯಾಗಿದ್ದು(Autonomous), ಮಾನ್ಯ ಅಧ್ಯಕ್ಷರು ಮತ್ತು ಸಲಹಾ ಸಮಿತಿಯ ಅನುಮೋದನೆಯಂತೆ ಸಿದ್ಧಪಡಿಸಿದ ನಿಯಮಗಳ ಅನ್ವಯ (ನಿಯಮಾವಳಿ)ಪರೀಕ್ಷೆ ನಡೆಸಲಾಗುವುದು.

ಸಾಹಿತ್ಯ ಪರೀಕ್ಷೆಗಳಲ್ಲಿ ತೇರ್ಗಡೆಯಾದರೆ ಕರ್ನಾಟಕ ಸರ್ಕಾರದ ಇಲಾಖೆಗಳಲ್ಲಿ ಭಾಷಾ ಪರೀಕ್ಷೆಯಿಂದ ವಿನಾಯಿತಿ ಇರುತ್ತದೆ. ಯಾವುದೇ **ಪದವೀಧರರಾಗಿದ್ದು** ಕನ್ನಡ 'ರತ್ನ' ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಬೆಂಗಳೂರು ಹಾಗೂ ಗುಲ್ಬರ್ಗ ವಿಶ್ವವಿದ್ಯಾನಿಲಯಗಳು ಕನ್ನಡ ಎಂ.ಎ.ಗೆ ಪ್ರವೇಶಾವಕಾಶ ಕಲ್ಪಿಸಿವೆ.

Govt. Notification No. GAD 65 SSR 75, Dated 10-3-1976 , GSR 91.

Amendment of Rule 5 :-

In Sub-Rule (1) of Rule 5 of the Karnataka Civil Services (Service and Kannada Language Examinations) Rules, 1974 (hereinafter referred to as the said rules) :

1)"(a) Diploma Course or Certificate Course in Kannada conducted by Bangalore University or Kava or Jana or Ratna Examinations conducted by Kannada Sahitya Parishat."

"(b) Any examination specified in schedule III as equivalent to the Kannada Language Examination.

ಕನ್ನಡ ಸಾಹಿತ್ಯ ಪರಿಷತ್ತಿನ ಕಾವ ಅಥವಾ ಜಾಣ ಅಥವಾ ರತ್ನ ಪರೀಕ್ಷೆಗಳಿಗೆ ಕುಳಿತು ತೇರ್ಗಡೆಯಾದ ಕರ್ನಾಟಕ ಸರ್ಕಾರದ ಅಧಿಕಾರಿಗಳು ಮತ್ತು ನೌಕರರಿಗೆ ಇಲಾಖೆಯಿಂದ ಗೊತ್ತು ಮಾಡಿರುವ ಇಲಾಖಾ ಭಾಷಾ ಪರೀಕ್ಷೆಯಿಂದ ವಿನಾಯಿತಿ ದೊರೆಯುತ್ತದೆ.

ಸಾಹಿತ್ಯ ಪರೀಕ್ಷೆಗಳಿಗೆ ಜುಲೈ ೧ರಿಂದ ಅರ್ಜಿ ಆಹ್ವಾನಿಸಲಾಗುವುದು. ಆಗಸ್ಟ್ ೩೧ ಕೊನೆಯ ದಿನಾಂಕ. ಸೆಪ್ಟೆಂಬರ್ ೧೫ರವರೆಗೆ ದಂಡ ಶುಲ್ಕ ರೂ. ೫೦–೦೦ ಗಳೊಂದಿಗೆ ಅರ್ಜಿ ಸ್ವೀಕಾರ. ಪ್ರವೇಶ ಪತ್ರಗಳನ್ನು ಅಂಚೆಯ ಮೂಲಕ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕೆಲವು ದಿನಗಳ ಮುಂಚಿತವಾಗಿಯೇ ಕಳುಹಿಸಲಾಗುವುದು. ಡಿಸೆಂಬರ್ ತಿಂಗಳಿನ ಕೊನೆಯ ವಾರದಲ್ಲಿ ಪರೀಕ್ಷೆಗಳನ್ನು ನಡೆಸಲಾಗುವುದು. ಫಲಿತಾಂಶವನ್ನು ಪರೀಕ್ಷೆ ನಡೆಸಿದ ಒಂದು ತಿಂಗಳಲ್ಲಿ ಪ್ರಕಟಿಸಲಾಗುವುದು ಮತ್ತು ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು ಫಲಿತಾಂಶ ಪ್ರಕಟಿಸಿದ ೧೫ ದಿನಗಳ ನಂತರ ರಿಜಿಸ್ಟರ್ಡ್ ಅಂಚೆ ಮೂಲಕ ಅಭ್ಯರ್ಥಿಗಳಿಗೆ ರವಾನಿಸಲಾಗುವುದು.

ಈ ಪರೀಕ್ಷೆಗಳಲ್ಲಿ ರ್‍ಯಾಂಕ್ ಪಡೆದ ವಿಜೇತರಿಗೆ ದತ್ತಿದಾನಿಗಳು ಆಶಯದಂತೆ ನಗದು ರೂಪದಲ್ಲಿ ರ್‍ಯಾಂಕ್ ಬಹುಮಾನ ನೀಡಲಾಗುವುದು.

* **'ಸಾಹಿತ್ಯ ಪೋಷಕ ನಿಧಿ' ಬಹುಮಾನ**
* **ಶ್ರೀ ಕೆ. ರಾಮಸ್ವಾಮಿ ದತ್ತಿನಿಧಿ ಮತ್ತು ದಿ॥ ಕೈವಾರ ರಾಜಾರಾವ್ ದತ್ತಿನಿಧಿ**
* **ಕೆ.ಬಿ. ಅಶ್ವತ್ಥಮ್ಮ ಎಂ.ಸಿ. ರಾಜು ದತ್ತಿ' ನಿಧಿ**
* **ದಿ॥ ಕೈವಾರ್ ರಾಜಾರಾವ್ ದತ್ತಿನಿಧಿ**

ಮೇಲ್ಕಂಡ ದತ್ತಿ ಮೊತ್ತದ ಜೊತೆಗೆ ಪರಿಷತ್ತಿನ ವತಿಯಿಂದ ಪ್ರೋತ್ಸಾಹ ಧನವನ್ನು ಸೇರಿಸಿ ಕ್ರಮವಾಗಿ ರೂ.೧೦,೦೦೦=೦೦, ರೂ.೭,೫೦೦=೦೦ ಹಾಗೂ ರೂ. ೫,೦೦೦=೦೦ಗಳ ಬಹುಮಾನವನ್ನು ನೀಡಲಾಗುವುದು. ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನವನ್ನು ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಏರ್ಪಡಿಸಿ ಪ್ರತಿ ವರ್ಷ ನೀಡಲಾಗುತ್ತಿದೆ. ಅಲ್ಲದೇ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿ ರಾಜ್ಯಾದ್ಯಂತ ರ್‍ಯಾಂಕ್ ಪಡೆದ ಮೊದಲ ೨೦ ವಿದ್ಯಾರ್ಥಿಗಳಿಗೂ ಸಹ ನಗದು ಬಹುಮಾನವನ್ನು ನೀಡಲಾಗುವುದು.

## ೨೦೨೧-೨೨ನೆಯ ಸಾಲಿನ ಸಾಹಿತ್ಯ ಪರೀಕ್ಷೆಗಳ ರ‍್ಯಾಂಕ್ ವಿಜೇತರು :

### <u>ಕನ್ನಡ ಪ್ರವೇಶ :</u>

ಪ್ರಥಮ ರ‍್ಯಾಂಕ್



ಕಾವ್ಯ ಎಲ್.

ದ್ವಿತೀಯ ರ‍್ಯಾಂಕ್



ಸತ್ಯ ಶಿವಾನಿ

ತೃತೀಯ ರ‍್ಯಾಂಕ್



ಮನುಶ್ರೀ ಜಿ.ಜೆ.

ತೃತೀಯ ರ‍್ಯಾಂಕ್



ಅಶ್ವಿನಿ ಎನ್.

### <u>ಕನ್ನಡ ಕಾವ :</u>

ಪ್ರಥಮ ರ‍್ಯಾಂಕ್



ನಾಗರಾಜಸ್ವಾಮಿ ಎನ್.

ದ್ವಿತೀಯ ರ‍್ಯಾಂಕ್



ಶ್ವೇತ ಡಿ.

ತೃತೀಯ ರ‍್ಯಾಂಕ್



ಪ್ರೀತಿ. ಎಲ್.

### <u>ಕನ್ನಡ ಜಾಣ :</u>

ಪ್ರಥಮ ರ‍್ಯಾಂಕ್



ರಾಮಸಂಜೀವಯ್ಯ ಕೆ.ವಿ.

ದ್ವಿತೀಯ ರ‍್ಯಾಂಕ್



ವೆಂಕಟಲಕ್ಷ್ಮಮ್ಮ ಟಿ.

ತೃತೀಯ ರ‍್ಯಾಂಕ್



ಸಚ್ಚಿದಾನಂದ ವಲ್ಲೆಪೂರೆ

### <u>ಕನ್ನಡ ರತ್ನ :</u>

ಪ್ರಥಮ ರ‍್ಯಾಂಕ್



ಮೋಹನ್‌ದಾಸ್ ಶೆಟ್ಟಿ

ದ್ವಿತೀಯ ರ‍್ಯಾಂಕ್



ಆಶಾ ವೆಂಕಟೇಶ್

ತೃತೀಯ ರ‍್ಯಾಂಕ್



ಸಂಗೀತ ವಿ.

ಪರಿಷತ್ತಿನ ಪರೀಕ್ಷೆಗಳಾದ ಪ್ರವೇಶ ಪರೀಕ್ಷೆಗೆ ಎರಡು ಪತ್ರಿಕೆಗಳು, ಕಾವ ಪರೀಕ್ಷೆಗೆ ೨ ಪತ್ರಿಕೆಗಳು ಮತ್ತು ಮೌಖಿಕ ಪರೀಕ್ಷೆ, ಜಾಣ ಪರೀಕ್ಷೆಗೆ ೪ ಪತ್ರಿಕೆಗಳು ಮತ್ತು ಮೌಖಿಕ ಪರೀಕ್ಷೆ ಹಾಗೂ ರತ್ನ ಪರೀಕ್ಷೆಗೆ ಐದು ಪತ್ರಿಕೆಗಳಿದ್ದು (ಈ ಹಿಂದೆ ರತ್ನ ಪರೀಕ್ಷೆಗೆ ೮,೭,೬ ಪತ್ರಿಕೆಗಳಿದ್ದವು) ಪಠ್ಯಪುಸ್ತಕಗಳನ್ನು ೩ ರಿಂದ ೪ ವರ್ಷಗಳ ಅವಧಿಯೊಳಗೆ ವಿಷಯಾನುಸಾರ ತಜ್ಞರು, ವಿದ್ವಾಂಸರ, ಸಾಹಿತಿಗಳ ಸೂಚನೆಯಂತೆ ಪರಿಷ್ಕರಿಸಿ ಸಿದ್ಧಪಡಿಸಲಾಗುವುದು. ಈ ಹಿಂದೆ ೨೦೧೮ರಲ್ಲಿ ಸಾಹಿತ್ಯ ಪರೀಕ್ಷೆ ಪಠ್ಯಪುಸ್ತಕಗಳು ಬದಲಾವಣೆಗೊಂಡಿದ್ದು, ಮುಂದಿನ ದಿನಗಳಲ್ಲಿ ಪಠ್ಯಪುಸ್ತಕ ರಚನಾ ಸಮಿತಿ ಸಭೆಯನ್ನು ರಚಿಸಿ ಪಠ್ಯಪುಸ್ತಕಗಳನ್ನು ಬದಲಾವಣೆ ಮಾಡಲಾಗುವುದು.

***ಶಾಸನಶಾಸ್ತ್ರ ಡಿಪ್ಲೊಮಾ***

೧. ಪ್ರಾಚೀನ ಶಾಸನ ಲಿಪಿ ಹಾಗೂ ಇತಿಹಾಸ ಅಧ್ಯಯನ ಕುರಿತಂತೆ ೧೯೭೪ರಿಂದ ಶಾಸನಶಾಸ್ತ್ರ ಡಿಪ್ಲೊಮಾ ತರಗತಿ ಪ್ರಾರಂಭವಾಯಿತು. ೯ ತಿಂಗಳ ಕೋರ್ಸ್ ಇದಾಗಿದ್ದು, ಪಿ.ಯು.ಸಿ. ವಿದ್ಯಾರ್ಹತೆ ಅಥವಾ ೨೧ ವರ್ಷ ಮೇಲ್ಪಟ್ಟವರು ತರಗತಿಗೆ ಹೆಸರು ನೋಂದಾಯಿಸಬಹುದಾಗಿದೆ. ವಾರದಲ್ಲಿ ನಾಲ್ಕು ದಿನಗಳು (ಮಂಗಳವಾರ ದಿಂದ ಶುಕ್ರವಾರದವರೆಗೆ) ಸಂಜೆ ೬ ರಿಂದ ೭ರವರೆಗೆ ತರಗತಿಗಳು ನಡೆಯುತ್ತವೆ

**ಶಾಸನ ಶಾಸ್ತ್ರ ಡಿಪ್ಲೊಮಾ ತರಗತಿ ಬೋಧಕರು :**

**೧. ಡಾ. ಎನ್.ಆರ್. ಲಲಿತಾಂಬ**
**೨. ದೇವರಾಜ ಸ್ವಾಮಿ**
**೩. ಡಾ. ಸ್ಮಿತಾ ರೆಡ್ಡಿ**

***ಪಿ.ಎಚ್.ಡಿ.***

ಕನ್ನಡ ಸಾಹಿತ್ಯ ಪರಿಷತ್ತು ಸಂಶೋಧನಾ ಕೇಂದ್ರವನ್ನು ಹೊಂದಿದ್ದು, ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದು ಪಿಎಚ್.ಡಿ. ಸಂಶೋಧನಾ ಅಧ್ಯಯನವನ್ನು ನಡೆಸುತ್ತಿದೆ. ಸುಮಾರು ೧೫ ಸಂಶೋಧನಾರ್ಥಿಗಳು ಸಾಹಿತ್ಯ ಪರಿಷತ್ತಿನ ಮೂಲಕ ಹಂಪಿ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದಿರುತ್ತಾರೆ. ಪ್ರಸ್ತುತ ೨೦೨೧-೨೨ನೇ ಸಾಲಿಗೆ ಕೆಳಗಿನ ನಾಲ್ಕು ಮಂದಿ ಸಂಶೋಧನಾರ್ಥಿಗಳಿಗೆ ೩೦ನೇ ಘಟಿಕೊತ್ಸವದಲ್ಲಿ ಹಂಪಿ ವಿಶ್ವವಿದ್ಯಾಲಯವು ಪಿಎಚ್.ಡಿ. ಪದವಿ ನೀಡಿ ಗೌರವಿಸಿದೆ.

೧. **೨೦೧೫-೧೬ನೇ ಸಾಲಿನ ಸಂಶೋಧನಾ ವಿದ್ಯಾರ್ಥಿ ರಾಘವೇಂದ್ರ ಬಿ.ಎ.**



೨. **೨೦೧೬-೧೭ನೇ ಸಾಲಿನ ಸಂಶೋಧನಾ ವಿದ್ಯಾರ್ಥಿಗಳು**



**ರೂಪ ಅರ್.**



**ಶಬೀನಾ**

೩. **೨೦೧೭-೧೮ನೇ ಸಾಲಿನ ಸಂಶೋಧನಾ ವಿದ್ಯಾರ್ಥಿ ಚಂದ್ರಶೇಖರ ಎಂ.**

